ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಕ್ಕಮಗಳೂರು.

ದಿನಾಂಕಃ

ಸಿ.ಸಿ.ನಂ.29/2020

ಪಿರ್ಯಾದುದಾರರು: ಶ್ರೀಮತಿ ನಳಿನ ಡಿ'ಸಾ.
ವಯಸ್ಸು ಸುಮಾರು 62 ವರ್ಷ,
ಅಧ್ಯಕ್ಷರು, ಟೌನ್ ಮಹಿಳಾ ಸಮಾಜ (ರಿ),
ಚಿಕ್ಕಮಗಳೂರು ನಗರ.

-ವಿರುದ್ಧ-

ಆರೋಪಿತರುಃ

1 ಶ್ರೀಮತಿ ಶಾಂತಿ ಶ್ರೀನಿವಾಸ್
ವಯಸ್ಸು ಸುಮಾರು 80 ವರ್ಷ,
ಮಾಜಿ ಅಧ್ಯಕ್ಷರು, ಟೌನ್ ಮಹಿಳಾ ಸಮಾಜ (ರಿ), ವಾಸಃ ಸ್ಪೆನ್ಸರ್ ರಸ್ತೆ, ಹೊಸಮನೆ,
ಚಿಕ್ಕಮಗಳೂರು ನಗರ.

2 ಶ್ರೀಮತಿ ಗೀತಾ ಎಂ.ಎಲ್. ಮೂರ್ತಿ,
ವಯಸ್ಸು ಸುಮಾರು 60 ವರ್ಷ,
ಮಾಜಿ ಕಾರ್ಯದರ್ಶಿಗಳು ಹಾಗೂ
ಹಾಲಿ ನಿರ್ದೇಶಕರು,
ಟೌನ್ ಮಹಿಳಾ ಸಮಾಜ (ರಿ),
ವಾಸಃ ಸಾಯಿ ನಿಲಯ ಕೋಟೆ,
ಚಿಕ್ಕಮಗಳೂರು ನಗರ.

3. ಶ್ರೀಮತಿ ನೇತ್ರಾ ವೆಂಕಟೇಶ್,
ವಯಸ್ಸು ಸುಮಾರು ವರ್ಷ,
ಕೋಂ ವೆಂಕಟೇಶ್,
ಮಾಜಿ ಖಜಾಂಚಿಗಳು, ಹಾಲಿ
ನಿರ್ದೇಶಕರು, ಟೌನ್ ಮಹಿಳಾ ಸಮಾಜಿ
(ರಿ).

<u>ದಂಡ ಪ್ರಕ್ರಿಯ ಸಂಹಿತೆ ಕಲಂಃ 313 ರ ಅಡಿಯಲ್ಲಿ ಆರೋಪಿ ಹೇಳಿಕೆ</u>

1. ಅಭಿಯೋಜನೆಯವರ ಪರ ಸಾಕ್ಷಿ ವಿಚಾರಣೆಯನ್ನು ಕೇಳಿರುವಿಯಾ?

   ಉತ್ತರ :

2. ಫ್ರಾಸಾ-1 – ಶ್ರೀಮತಿ ನಳಿನ ಡಿ'ಸೋಜಾ ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ 1 ನೇ ಆರೋಪಿಯಾದ ನೀವು ಹಿಂದಿನ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದು, 2 ನೇ ಆರೋಪಿಯಾದ ನೀವು ಹಿಂದಿನ ಆಡಳಿತ ಮಂಡಳಿಯ ಕಾರ್ಯದರ್ಶಿ ಮತ್ತು ಈಗಿನ ಆಡಳಿತ ಮಂಡಳಿಯ ನಿರ್ದೇಶಕರಾಗಿದ್ದು ಹಾಗೂ 3 ನೇ ಆರೋಪಿಯಾದ ನೀವು ಹಿಂದಿನ ಆಡಳಿತ ಮಂಡಳಿಯ ಖಜಾಂಚಿ ಮತ್ತು ಈಗಿನ ಆಡಳಿತ ಮಂಡಳಿಯ ನಿರ್ದೇಶಕರಾಗಿದ್ದು, ದಿ: 12.1.2015 ರಂದು ತಾವು ಜಿಲ್ಲಾ ನೋಂದಣಾಧಿಕಾರಿಗಳಿಗೆ ಒಂದು ದೂರನ್ನು ಸಲ್ಲಿಸಿ ಟಿ.ಎಂ.ಎಸ್ ಸಂಸ್ಥೆಯಲ್ಲಿ ಬೈಲಾ ಉಲ್ಲಂಘನೆಯಾಗಿದೆ ಹಣದ ದುರುಪಯೋಗವಾಗಿದೆ, ಚುನಾವಣೆಯಲ್ಲಿ ಅವ್ಯವಹಾರ ಆಗಿದೆ ಹಾಗೂ ಸರ್ವ ಸದಸ್ಯರ ಸಭೆಯನ್ನು 7 ವರ್ಷದಿಂದ ಕರೆದಿಲ್ಲ ಎಂದು ತಿಳಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

   ಉತ್ತರ :

3. ಫ್ರಾಸಾ-1 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ನಂತರ ಜಿಲ್ಲಾ ನೋಂದಣಾಧಿಕಾರಿಗಳು ದೂರನ್ನು ಪರಿಶೀಲಿಸಿ ದಿ: 17.04.2015 ರಂದು ಈ ದೂರಿನ ಬಗ್ಗೆ ವಿಚಾರಣೆ ನಡೆಯಬೇಕು ಎಂದು ಆದೇಶ ಹೊರಡಿಸಿದ್ದು, ದಿ: 22.6.2015 ರಂದು ಶ್ರೀ ವೀರೇಗೌಡ, ವಕೀಲರು, ಹಾಸನ ಇವರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಿ 90 ದಿನದ ಒಳಗಡೆ ವರದಿ ಸಲ್ಲಿಸಬೇಕು ಎಂದು ಆದೇಶ ಮಾಡಿದ್ದಾಗಿ, ನಂತರ ಶ್ರೀ ವೀರೇಗೌಡ, ವಕೀಲರು ವಿಚಾರಣೆಯನ್ನು ನಡೆಸಿ ದಿ: 01.06.2016 ರಂದು ಎಲ್ಲಾ ಆರೋಪಗಳು ಸಾಭೀತಾಗಿದೆ ಎಂದು ಸಮಗ್ರ ವರದಿಯನ್ನು ಜಿಲ್ಲಾ ನೋಂದಣಾಧಿಕಾರಿಗಳಿಗೆ ಸಲ್ಲಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

   ಉತ್ತರ :

4. ಫ್ರಾಸಾ-1 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ನಂತರ ಜಿಲ್ಲಾ ನೋಂದಣಾಧಿಕಾರಿಗಳು ದಿ: 12.09.2016 ರಂದು ತಹಶೀಲ್ದಾರರನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡುವಂತೆ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಿದ್ದು, ನಂತರ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ತಹಶೀಲ್ದಾರರನ್ನು ಆಡಳಿತಾಧಿಕಾರಿಯಾಗಿ ನೇಮಕ ಮಾಡುವಂತೆ ದಿಃ 7.10.2016 ರಂದು ಶಿಫಾರಸ್ಸು ಮಾಡಿದ್ದಾಗಿ, ನಂತರ ದಿಃ 02.5.2017 ರಂದು ಆಡಳಿತಾಧಿಕಾರಿಯನ್ನಾಗಿ ಎ.ಆರ್.ಸಿ.ಎಸ್ ರವರನ್ನು ನೇಮಕ ಮಾಡಿದ್ದಾಗಿ, ಅವರನ್ನು 3 ತಿಂಗಳ ಅವಧಿಗೆ ನೇಮಕ ಮಾಡಲಾಗಿದ್ದು, ಅವರು ತಮ್ಮ ಅವಧಿಯಲ್ಲಿ ಚುನಾವಣೆಯನ್ನು ನಡೆಸಿ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ ಹೋಗಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

5. ಫ್ರಾಸಾ-1 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ಸದರಿ ದೂರುಗಳ ಬಗ್ಗೆ ಎ ಆರ್ ಸಿ ಎಸ್ ರವರು ಯಾವುದೇ ಕ್ರಮ ತೆಗೆದುಕೊಳ್ಳದೆ ಚುನಾವಣೆ ನಡೆಸಿ ಹೋಗಿದ್ದಾಗಿ, ನಂತರ ನೂತನ ಆಡಳಿತ ಮಂಡಳಿ ಆದ ತಮಗೆ ದಿ: 5.8.2017 ರಂದು ಜಿಲ್ಲಾ ನೋಂದಣಾಧಿಕಾರಿಗಳಿಂದ ಅನುಪಾಲನಾ ವರದಿ ಸಲ್ಲಿಸುವಂತೆ ಆದೇಶ ಬಂದಿದ್ದು, ಅದರಲ್ಲಿ ಮೇಲ್ನೋಟಕ್ಕೆ ದುರುಪಯೋಗವಾಗಿರುವ ಹಣವನ್ನು ವಸೂಲಾತಿಗೆ ಕ್ರಮ ತೆಗೆದುಕೊಂಡು ವರದಿ ಸಲ್ಲಿಸುವಂತೆ ಆದೇಶ ಬಂದಿದ್ದು, ನಂತರ ತಾವು ಆಡಳಿತ ಮಂಡಳಿಯಲ್ಲಿ ಇದರ ಬಗ್ಗೆ ಅನುಮೋದನೆಯನ್ನು ಪಡೆದುಕೊಂಡು ಸಿ ಎ ಆದವರಿಂದ ರೀ ಆಡಿಟಿಂಗ್ ಗೆ ಸಲ್ಲಿಸಿದ್ದಾಗಿ, ಶ್ರೀಮತಿ ಪ್ರಜ್ಞಾ ಸವೂರು ಅವರು 2010 ರಿಂದ 2017 ರವರೆಗಿನ ರೀ ಆಡಿಟಿಂಗ್ ಮಾಡಿ ವರದಿ ಸಲ್ಲಿಸಿದ್ದಾಗಿ, ಇದರಲ್ಲಿ ಸುಮಾರು ರೂ. 10,45,23,562 ದುರುಪಯೋಗ ಆಗಿದೆ ಅಂತ ಕಂಡು ಬಂದಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

6. ಫ್ರಾಸಾ-1 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ನಂತರ ಗೀತಾಮೂರ್ತಿ ಅವರ ಕಾಲದಲ್ಲಿ ಕೆಲವು ಎಫ್.ಡಿ ಗಳನ್ನು ಡ್ರಾ ಮಾಡಿದ್ದು, ಒಟ್ಟು 6 ಎಫ್.ಡಿ ಗಳನ್ನು ಡ್ರಾ ಮಾಡಿ ಆ ಹಣವನ್ನು ಎಲ್ಲಿ ಹಾಕಿದ್ದಾರೆ ಅಂತ ಎಲ್ಲೂ ಲೆಕ್ಕ ಪತ್ರ ಇಟ್ಟಿಲ್ಲ, ಅದು ರೂ. 12,22,734/- ದುರುಪಯೋಗ ಮಾಡಿಕೊಂಡಿದ್ದು, ನಂತರ ಕಟ್ಟಡ ನಿರ್ಮಾಣ ಮಾಡಿ ರೂ. 31,65,000/- ಗಳನ್ನು ದುರುಪಯೋಗ ಮಾಡಿದ್ದಾಗಿ, ನಂತರ ಶೌಚಾಲಯ ನಿರ್ಮಾಣಕ್ಕೆ ರೂ. 3,75,000/- ಖರ್ಚು ಮಾಡಿರುವುದಾಗಿ ತೋರಿಸಿ ಒಟ್ಟು ರೂ. 35,40,000/- ಹಣವನ್ನು ದುರುಪಯೋಗ ಮಾಡಿದ್ದು, ಈ ಕೆಲಸಗಳಿಗೆ ಯಾವುದೇ ಕೊಟೇಷನ್ ಕರೆದಿಲ್ಲ, ಬಿಲ್ಲುಗಳನ್ನು ಇಟ್ಟಿಲ್ಲ, ಸರಕುಗಳ ಬೆಲೆ ತೋರಿಸಿಲ್ಲ, ಲೀಸ್ಟ್ ಇಟ್ಟಿಲ್ಲ, ಪ್ರೊಸೀಜರ್ ಫಾಲೋ ಮಾಡಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

7. ಫ್ರಾಸಾ-1 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ನಂತರ ರೂ. 35,40,000/- ಹಣವನ್ನು ಗೋಪಿನಾಥ್ ಎನ್ನುವ ಇಂಜಿನಿಯರ್ ಗೆ ಕೊಟ್ಟಿದ್ದು ಅದರಲ್ಲಿ ಆದಾಯ ತೆರಿಗೆ ರೂ. 3,54,000/- ಡಿಡಕ್ಟ್ ಮಾಡಿಲ್ಲ, ಗುತ್ತಿಗೆದಾರರಿಗೆ ಮತ್ತು ತಮಗೆ ಅನುಕೂಲ ಮಾಡಿಕೊಳ್ಳಲು ಹೀಗೆ ಮಾಡಿದ್ದಾರೆ, ಅವರು ಇಷ್ಟೊಂದು ಹಣ ದುರುಪಯೋಗ ಮಾಡಿದ ಕಾರಣ 2017 ರವರೆಗೆ ಚುನಾವಣೆ ನಡೆಸದೇ ಅಧಿಕಾರ ಮುಂದುವರೆಸಿಕೊಂಡು ಬಂದಿದ್ದು, ಅಡಳಿತಾಧಿಕಾರಿಗೆ ಅವರು ಚಾರ್ಜ್ ಕೊಡುವಾಗ ಯಾವುದೇ ರೆಕಾರ್ಡ್ ಕೊಟ್ಟಿಲ್ಲ, ಡೇ ಬುಕ್, ಅಕ್ವಿಟೆನ್ಸ್ ಬುಕ್, ಬಿಲ್ ಪುಸ್ತಕ ಮುಂತಾದ ದಾಖಲೆಗಳನ್ನು ಕೊಟ್ಟಿಲ್ಲ, ಎರಡು ವಾಹನಗಳಲ್ಲಿ ಎಲ್ಲಾ ದಾಖಲಾತಿಗಳನ್ನು 2 ನೇ ಆರೋಪಿಯಾದ ನಿಮ್ಮ ಮನೆಗೆ ತುಂಬಿಕೊಂಡು ಹೋದ ಬಗ್ಗೆ ಮಾಹಿತಿ ಬಂದಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರಃ

8. ಫ್ರಾಸಾ-1 ರವರು ತಮ್ಮ ಮುಂದುವರೆದ ನುಡಿ ಸಾಕ್ಷ್ಯದಲ್ಲಿ ತಾವು ಅಧಿಕಾರಕ್ಕೆ ಬಂದ ನಂತರ ಮೇಲಿನ ಎಲ್ಲಾ ದಾಖಲೆಗಳನ್ನು ಕೇಳಿ

ಅವರಿಗೆ ಎರಡು ಬಾರಿ ಪತ್ರ ಬರೆದಿದ್ದಾಗಿ, ಅವರು ತನ್ನ ಹತ್ತಿರ ಯಾವ ದಾಖಲೆಯೂ ಇಲ್ಲಾ ಎಲ್ಲಾ ಸಿಬ್ಬಂದಿಗಳೇ ಮೈಂಟೇನ್ ಮಾಡುತ್ತಿದ್ದರು ಅಂತ ಉತ್ತರ ಕೊಟ್ಟಿದ್ದು, ಸಿಬ್ಬಂದಿಯವರಿಗೆ ಪತ್ರ ಹಾಕಿ ಕೇಳಿದಾಗ ಅವರು ಎಲ್ಲಾ ವ್ಯವಹಾರವನ್ನು ದಾಖಲೆಗಳನ್ನು ಗೀತಾಮೂರ್ತಿಯವರೇ ಮಾಡುತ್ತಿದ್ದರು ಎಂದು ಲಿಖಿತವಾಗಿ ಉತ್ತರ ಕೊಟ್ಟಿದ್ದಾಗಿ, ಅಕ್ವಿಟೆನ್ಸ್ ರಿಜಿಸ್ಟರ್ ಎಲ್ಲಿದೆ ತಂದು ಕೊಡಿ ಎಂದು ಕೇಳಿದಾಗ ಅದು ಕಳೆದು ಹೋಗಿದೆ ಎಂದು ಉತ್ತರ ಕೊಟ್ಟಿದ್ದಾಗಿ, ಒಟ್ಟು ರೂ. 10,96,40,296/- ಹಣವನ್ನು ಅವರು ದುರುಪಯೋಗ ಮಾಡಿಕೊಂಡಿದ್ದು, ಇದರ ಬಗ್ಗೆ ತಾವು ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟಾಗ ಪೋಲಿಸರು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

9. ಫ್ರಾಸಾ-1 -ರವರು ತಮ್ಮ ನುಡಿ ಸಾಕ್ಷ್ಯದಲ್ಲಿ ನಂತರ ಪೋಲಿಸ್ ವರಿಷ್ಠಾಧಿಕಾರಿಗಳಿಗೂ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಕೇಳಿಕೊಂಡಿದ್ದಾಗಿ, ಆದರೂ ಅವರು ಯಾವುದೇ ಕ್ರಮ ವಹಿಸಲಿಲ್ಲ, ಆರೋಪಿತರಾದ ನಿಮಗೆ ಆಡಿಟಿಂಗ್ ಬಗ್ಗೆ ತಾವು ಎರಡು ಬಾರಿ ಪತ್ರ ಬರೆದು ವಿವರಣೆ ಕೇಳಿದ್ದಾಗಿ, ಅದಕ್ಕೆ ಅವರು ಅಸಂಬದ್ಧ ಉತ್ತರ ಕೊಟ್ಟಿದ್ದಾಗಿ, ಇಷ್ಟೊಂದು ದೊಡ್ಡ ಪ್ರಮಾಣದ ಅಕ್ರಮ ನಡೆದಿರುವುದಕ್ಕೆ ಕಾನೂನು ಕ್ರಮ ತೆಗೆದುಕೊಳ್ಳಲು ಕೇಳಿಕೊಂಡಿದ್ದಾಗಿ, ನಂತರ ದಿ: 14.12.2019 ರಂದು ತಾನು ವಿಶೇಷ ಸರ್ವ ಸದಸ್ಯರ ಸಭೆಯನ್ನು ಕರೆದು ರೀ ಆಡಿಟಿಂಗ್ ರಿಪೋರ್ಟ್ ಬಗ್ಗೆ ಅಜೆಂಡಾವನ್ನು ಇಟ್ಟು ಸಭೆಯಲ್ಲಿ ಕಾನೂನು ಕ್ರಮ ಕೈಗೊಳ್ಳಲು ಅನುಮೋದನೆ ಪಡೆದುಕೊಂಡಿದ್ದಾಗಿ, ಈ ಬಗ್ಗೆ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುವಿರಿ?

ಉತ್ತರ :

10. ನೀವು ಈ ಕೇಸಿನಲ್ಲಿ ಹೆಚ್ಚಿಗೆ ಏನನ್ನಾದರು ಹೇಳುವುದಿದೆಯೇ?

ಉತ್ತರಃ

11. ನೀವು ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ಅಥವಾ ಯಾವುದಾದರೂ ದಾಖಲೆ ಹಾಜರುಪಡಿಸುತ್ತೀರಾ?

ಉತ್ತರಃ

ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ಕೇಳಿ, ಅವರು ಕೊಟ್ಟ ಉತ್ತರಗಳನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜವಾಗಿದೆ ಎಂದು ಧೃಡೀಕರಿಸುತ್ತೇನೆ.

Sd/-
[ಕುಮಾರಿ ಸುಜಾತ ]
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಮು.ನ್ಯಾದಂ., ಚಿಕ್ಕಮಗಳೂರು.